**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಉಪಸ್ಥಿತರು**

ಶ್ರೀ ರಾಮಮೂರ್ತಿ ಎನ್., ಬಿ.ಎ., ಎಲ್‌ಎಲ್‌ಬಿ.,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

**ದಿನಾಂಕಃ 23 ನೇ ಏಪ್ರಿಲ್ 2021.**

# ಅಸಲು ದಾವಾ ಸಂಖ್ಯೆ 212/2020

**ವಾದಿ/ಯರುಃ**

ಹೆಚ್.ಆರ್.ಚಂದ್ರಮ್ಮ ಕೋಂ ಮಲ್ಲಿಕಾರ್ಜುನಪ್ಪ, 65 ವರ್ಷ, ವ್ಯವಸಾಯಗಾರರು, ವಾಸ ಃ ಹಳಿಯೂರು ಗ್ರಾಮ, ಕಸಬಾ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಜಿ.ಸಿ.ತಿಮ್ಮಯ್ಯ, ನ್ಯಾಯವಾದಿಗಳು)

**-ವಿರುದ್ದ-**

**ಪ್ರತಿವಾದಿ/ಯರುಃ**

1) ಪುಟ್ಟಸ್ವಾಮಿ ಬಿನ್ ಲೇಟ್ ದಾಸಪ್ಪ, 46 ವರ್ಷ, ಕೂಲಿ ಕೆಲಸ,
2) ಗೌರಮ್ಮ ಕೋಂ ಲೇಟ್ ತೋಪಯ್ಯ, 42 ವರ್ಷ, ಮನೆಗೆಲಸ,
3) ಸ್ವಾಮಿ ಬಿನ್ ಲೇಟ್ ದಾಸಪ್ಪ, 35 ವರ್ಷ, ಕೂಲಿ ಕೆಲಸ,
4) ತಾಯಮ್ಮ ಕೋಂ ಲೇಟ್ ರಂಗಪ್ಪ, 48 ವರ್ಷ, ಮನೆಗೆಲಸ,
5) ಯಲ್ಲಮ್ಮ ಕೋಂ ಲೇಟ್ ಮಂಜಪ್ಪ, 30 ವರ್ಷ, ಮನೆಗೆಲಸ,
6) ರಮೇಶ ಬಿನ್ ಗುಂಡಪ್ಪ, 32 ವರ್ಷ, ಕೂಲಿ ಕೆಲಸ,

ಎಲ್ಲರೂ ವಾಸ ಃ ಹಳಿಯೂರು ಗ್ರಾಮ, ಕಸಬಾ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಟಿ.ಡಿ.ಕಿರಣ್ ಕುಮಾರ್, ನ್ಯಾಯವಾದಿಗಳು)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 11.08.2020 | | |
| 2 | ದಾವಾ ಸ್ವರೂಪ | ಶಾಶ್ವತ ನಿರ್ಬಂಧಕಾಜ್ಞೆ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 24.03.2021 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 23.04.2021 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 00 | 08 | 12 |

****

**-ತೀರ್ಪು-**

ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಸ್ವತ್ತಿಗೆ ಪ್ರತಿವಾದಿಯರು, ಅವರಿಂದ ನೇಮಕಗೊಂಡ ಯಾವುದೇ ಕೆಲಸಗಾರರು ಹಾಗೂ ಪ್ರತಿನಿಧಿಗಳು, ಬೆಂಬಲಿಗರು ಮತ್ತು ಯಾವುದೇ ವ್ಯಕ್ತಿಗಳು ಅತಿಕ್ರಮ ಪ್ರವೇಶವನ್ನುಂಟು ಮಾಡಿ, ದಾವಾ ಶೆಡ್ಯೂಲ್ ಸ್ವತ್ತಿನ ಕಲ್ಲುಕಂಬ ಮತ್ತು ತಂತಿಯನ್ನು ಕಿತ್ತು ಹಾಕದಂತೆ, ವಾದಿಯು ಹಾಕಿರುವ ಕಲ್ಲುಕಂಬಗಳಿಗೆ ತಂತಿಯನ್ನು ಹಾಕುವಾಗ ಅಡ್ಡಿಪಡಿಸದಂತೆ, ಯಾವುದೇ ರೀತಿಯ ಕ್ಷತಿಗಳನ್ನು ದಾವಾ ಸ್ವತ್ತಿಗೆ ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಹಾಗೂ ದಾವೆಯ ಖರ್ಚುವೆಚ್ಚಗಳನ್ನು ಹಾಗೂ ಇತರೆ ಸೂಕ್ತ ಪರಿಹಾರಗಳನ್ನು ಕೊಡಿಸುವಂತೆ ಕೋರಿ ಸಲ್ಲಿಸಿರುತ್ತಾರೆ.

**2. ವಾದಿಯ ವಾದಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆಃ-**

ವಾದಿಯು ದಾವಾ ಶೆಡ್ಯೂಲ್ ಸ್ವತ್ತನ್ನು ದಿನಾಂಕ 22.02.1999 ರಂದು ಲೇಟ್ ಈಶ್ವರಪ್ಪರವರ ಹೆಂಡತಿಯಾದ ಗೌರಮ್ಮ ಮತ್ತು ಅವರ ಮಗ ಹೆಚ್.ಈ.ಗಂಗಾಧರಪ್ಪರವರಿಂದ ನೋಂದಣಿ ಕ್ರಯಪತ್ರದ ಮೂಲಕ ಖರೀದಿಸಿದ್ದು,

ಸದರಿ ಸ್ವತ್ತಿನಲ್ಲಿ ಅಡಿಕೆ ಮತ್ತು ತೆಂಗಿನ ತೋಟ ಮಾಡಿ ಸುತ್ತಲೂ ಕಲ್ಲುಕಂಬ ಮತ್ತು ತಂತಿಯನ್ನು ಹಾಕಿಕೊಂಡು, ಯಾರದೇ ತಂಟೆ ತಕರಾರು ಇಲ್ಲದೆ ಶಾಂತಿಯುತ ಸ್ವಾಧೀನಾನುಭವ ಹೊಂದಿರುತ್ತಾರೆ. ಮೂಲತಃ ದಾವಾ ಸ್ವತ್ತಿನ ಸರ್ವೆ ನಂ.23/2 ಇದ್ದು, ಅದು ಪೋಡಿಯ ನಂತರ ಸರ್ವೆ ನಂ.23/5 ಆಗಿರುತ್ತದೆ.

3. ದಾವಾ ಸ್ವತ್ತಿನ ಉತ್ತರ ಭಾಗದಲ್ಲಿ ಸರ್ಕಾರಿ ಭೂಮಿ ಇದ್ದು, ಅದರಲ್ಲಿ ಪ್ರತಿವಾದಿಯರು ಅಕ್ರಮವಾಗಿ ತಾತ್ಕಾಲಿಕ ಶೆಡ್ ಗಳನ್ನು ಹಾಕಿಕೊಂಡಿದ್ದು, ದಾವಾ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಅನುಭವ, ಸ್ವಾಧೀನ ಹೊಂದದೇ ಇದ್ದರೂ ಸಹ ದಿನಾಂಕ 09.02.2020 ರಂದು ವಾದಿಯು ದಾವಾ ಸ್ವತ್ತಿನ ಬೇಲಿಯ ಹಳೆ ತಂತಿಯನ್ನು ತೆಗೆದು ಹೊಸ ತಂತಿ ಹಾಕುವ ಸಂದರ್ಭದಲ್ಲಿ ಪ್ರತಿವಾದಿಯರು ಏಕಾಏಕಿ ದಾವಾ ಶೆಡ್ಯೂಲ್ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ವಾದಿಯ ಸ್ವಾಧೀನಾನುಭವಕ್ಕೆ ತಂಟೆ ಮಾಡಿ ತಂತಿ ಬೇಲಿಯನ್ನು ಹಾಗೂ ಕಲ್ಲು ಕಂಬವನ್ನು ಮುರಿದು ಹಾಕಲು ಪ್ರಯತ್ನಿಸಿ, ಅವಾಚ್ಯ ಶಬ್ದಗಳಿಂದ ವಾದಿಯನ್ನು ನಿಂದಿಸಿರುತ್ತಾರೆ. ವಾದಿ ಮತ್ತು ಅವರ ಗಂಡ ಹೆಚ್.ಎಂ.ಮಲ್ಲಿಕಾರ್ಜುನಪ್ಪರವರು ದಿನಾಂಕ 09.02.2020 ರಂದು ತರೀಕೆರೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ವಾದಿ ಮತ್ತು ಪ್ರತಿವಾದಿಯರನ್ನು ಪೊಲೀಸ್ ಠಾಣೆಗೆ ಕರೆಸಿ ತಿಳುವಳಿಕೆ ನೀಡಿ, ವಿವಾದವು ಸಿವಿಲ್ ಸ್ವರೂಪದ್ದು ಆಗಿರುವುದರಿಂದ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿದ್ದು, ಪೊಲೀಸ್ ಠಾಣೆಯಲ್ಲಿ ಪ್ರತಿವಾದಿಯರು ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡುವುದಿಲ್ಲವೆಂದು ತಿಳಿಸಿದ್ದು, ನಂತರ ದಿನಾಂಕ 06.08.2020 ರಂದು ವಾದಿಯು

ದಾವಾ ಸ್ವತ್ತಿನ ಉತ್ತರ ಭಾಗದ ಕಲ್ಲುಕಂಬಕ್ಕೆ ಹಾಕಿದ್ದ ತಂತಿಯನ್ನು ಪ್ರತಿವಾದಿಯರು ಏಕಾಏಕಿ ತುಂಡರಿಸಿ ಕಿತ್ತು ಹಾಕಿದ್ದು, ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ, ತಂಟೆ ತಕರಾರು ಮಾಡಿರುತ್ತಾರೆ. ಆದ್ದರಿಂದ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತು ಕುರಿತಂತೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿರುತ್ತಾರೆ.

4. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ಆದರೆ ಸಾಕಷ್ಟು ಸಮಯಾವಕಾಶ ನೀಡಿದರೂ ಸಹ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

5. ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ವಾಸಾ-1 ಎಂದು ಸಾಕ್ಷೀಕರಿಸಿದ್ದು, ತನ್ನ ಪರವಾಗಿ ನಿಪಿ-1 ರಿಂದ 5 ದಾಖಲಾತಿಗಳನ್ನು ಗುರ್ತಿಸಿಕೊಂಡಿರುತ್ತಾರೆ.

6. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**7.** ಮೇಲ್ಕಾಣಿಸಿದ ವಾದಪತ್ರದ ಸಂಗತಿಗಳ ಮೇಲೆ ಈ ಕೆಳಕಾಣಿಸಿದ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತವೆ ಃ

1) ವಾದಿಯು ದಾವಾ ಸಲ್ಲಿಸಿದ ದಿನದಂದು ತಾನು ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿದ್ದೇನೆಂದು ರುಜುವಾತುಪಡಿಸುವರೇ?

2) ದಾವಾ ಸ್ವತ್ತಿನ ತನ್ನ ಶಾಂತಿಯುತ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು ತಂಟೆ ತಕರಾರು ಮಾಡಿದ್ದಾರೆಂದು ವಾದಿಯು ರುಜುವಾತುಪಡಿಸುತ್ತಾರೆಯೇ?

3) ವಾದಿಯು ದಾವೆಯಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ?

4) ಹಾಗಿದ್ದಲ್ಲಿ ಯಾವ ಆದೇಶ ಅಥವಾ ಡಿಕ್ರಿ?

8. ಮೇಲ್ಕಾಣಿಸಿದ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆಃ

ಅಂಶ - 1 ಃ ಸಕಾರಾತ್ಮಕವಾಗಿ,

ಅಂಶ - 2 ಃ ಸಕಾರಾತ್ಮಕವಾಗಿ,

ಅಂಶ - 3 ಃ ಸಕಾರಾತ್ಮಕವಾಗಿ,

ಅಂಶ- 4 ಃ ಅಂತಿಮ ಆದೇಶದಂತೆ,
ಈ ಕೆಳಗಿನ ಕಾರಣಗಳಿಗಾಗಿ,

**ಕಾ ರ ಣ ಗ ಳು**

9. **ಅಂಶ – 1 ರಿಂದ 3** ಃ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

10. ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ವಾಸಾ-1 ಎಂದು ಸಾಕ್ಷಿಕರಿಸಿದ್ದು, ತನ್ನ ಪರವಾಗಿ ನಿಪಿ-1 ರಿಂದ 5 ದಾಖಲಾತಿಗಳನ್ನು ಗುರ್ತಿಸಿಕೊಂಡಿರುತ್ತಾರೆ. ನಿಪಿ-1 ದಿನಾಂಕ 22.02.1999 ರ ಕ್ರಯಪತ್ರದ ದೃಢೀಕೃತ ಪ್ರತಿ ಇದ್ದು, ನಿಪಿ-2 ಸರ್ವೆ ನಂ.23/5 ಕ್ಕೆ ಸಂಬಂಧಪಟ್ಟಂತೆ 2019-20 ನೇ ಸಾಲಿನ

ಪಹಣಿ ಪತ್ರಿಕೆ ಇದ್ದು, ನಿಪಿ-3 ಎಂ.ಆರ್. ಸಂಖ್ಯೆ ಟಿ14/2017-18 ರ ಮ್ಯುಟೇಶನ್ ರಿಜಿಸ್ಟರ್ ಪ್ರತಿ ಇದ್ದು, ನಿಪಿ-4 ಕಂದಾಯ ರಶೀದಿ ಹಾಗೂ ನಿಪಿ-5 ತರೀಕೆರೆ ಪೊಲೀಸರು ನೀಡಿದ ಹಿಂಬರಹ ಇರುತ್ತದೆ.

11. ವಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಅಂಶಗಳನ್ನೇ ಪುನರುಚ್ಛರಿಸಿದ್ದು, ವಾದಿಯ ಪ್ರಕಾರ ತಾನು ದಾವಾ ಸ್ವತ್ತನ್ನು ದಿನಾಂಕ 22.02.1999 ರಂದು ನೋಂದಣಿ ಕ್ರಯಪತ್ರದ ಮೂಲಕ ಖರೀದಿಸಿದ್ದು, ಸದರಿ ಸ್ವತ್ತಿನ ಹಳೇ ಸರ್ವೆ ನಂ.23/2 ಆಗಿದ್ದು, ಪೋಡಿ ನಂತರ ಅದರ ಸರ್ವೆ ನಂ.23/5 ಆಗಿದ್ದು, ಸದರಿ ಸ್ವತ್ತಿನಲ್ಲಿ ಹಕ್ಕು, ಮಾಲೀಕತ್ವ ಹೊಂದಿ, ಯಾರದೇ ತಂಟೆ ತಕರಾರು ಇಲ್ಲದೆ ಸ್ವಾಧೀನ ಹೊಂದಿದ್ದು ಪ್ರತಿವಾದಿಯರು ತನ್ನ ಸ್ವಾಧೀನಕ್ಕೆ ತಂಟೆ ತಕರಾರು ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಪ್ರಸ್ತುತ ದಾವೆಯಲ್ಲಿ ಸಾಕಷ್ಟು ಸಮಯಾವಕಾಶ ನೀಡಿದರೂ ಸಹ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇದ್ದು, ವಾದಿಯ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ನಿರಾಕರಣೆಯಾಗದೇ ಉಳಿದಿರುತ್ತವೆ.

12. ವಾದಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ನಿಪಿ-1 ರ ಪ್ರಕಾರ ವಾದಿಯು ದಾವಾ ಸ್ವತ್ತನ್ನು ದಿನಾಂಕ 22.02.1999 ರಂದು ವಾದಪತ್ರದಲ್ಲಿ ತಿಳಿಸಿದಂತೆ ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ನಿಪಿ-2 ರಲ್ಲಿ ವಾದಿಯ ಹೆಸರು ದಾವಾ ಶೆಡ್ಯೂಲ್ ಸ್ವತ್ತಿಗೆ 2019-20 ನೇ ಸಾಲಿನಲ್ಲಿ ಸ್ವಾಧೀನದಾರರು ಎಂದು ನಮೂದಿಸಿರುವುದು ಕಂಡುಬರುತ್ತದೆ. ನಿಪಿ-3 ದಾವಾ ಶೆಡ್ಯೂಲ್ ಸ್ವತ್ತಿನ ಮ್ಯುಟೇಷನ್ ಪ್ರತಿ ಆಗಿದ್ದು, ಅದರಲ್ಲಿನ ಅಂಶಗಳಂತೆ

ದಾವಾ ಸ್ವತ್ತು ಹೊಸ ಸರ್ವೆ ನಂ.23/5 ಎಂದು ಹಾಗೂ ಅದಕ್ಕೆ ವಾದಿಯ ಹೆಸರು ಸ್ವಾಧೀನದಾರರು ಎಂದು ನಮೂದಿಸಿ ದಿನಾಂಕ 25.09.2017 ರಂದು ಮ್ಯುಟೇಷನ್ ಆಗಿರುವ ಬಗ್ಗೆ ಕಂಡುಬರುತ್ತದೆ. ನಿಪಿ-4 ರಲ್ಲಿ ವಾದಿಯು ದಾವಾ ಸ್ವತ್ತಿಗೆ ಕಂದಾಯವನ್ನು ಪಾವತಿಸಿರುವ ಬಗ್ಗೆ ಕಂಡುಬರುತ್ತದೆ. ನಿಪಿ-5 ರಲ್ಲಿ ವಾದಿಯ ಗಂಡ ಹೆಚ್.ಎಂ.ಮಲ್ಲಿಕಾರ್ಜುನಪ್ಪರವರು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದ ಪತ್ರದಲ್ಲಿ ಹೇಳಿದಂತೆ ದಿನಾಂಕ 09.02.2020 ರಂದು ತರೀಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಅದಕ್ಕೆ ಸಂಬಂಧಿಸಿದಂತೆ ಹಿಂಬರಹ ನೀಡಿರುವುದು ಕಂಡುಬರುತ್ತದೆ.

13. ವಾದಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಿಪಿ-1 ರಿಂದ 5 ದಾಖಲಾತಿ ಸಾಕ್ಷ್ಯಗಳು ವಾದ ಪತ್ರದಲ್ಲಿನ ಅಂಶಗಳಿಗೆ ಪೂರಕವಾಗಿ ಕಂಡುಬಂದಿದ್ದು, ನಿಪಿ-2 ರ ಪ್ರಕಾರ ವಾದಿಯು ದಾವಾ ಸಲ್ಲಿಸುವ ಸಮಯದಲ್ಲಿ ದಾವಾ ಸ್ವತ್ತಿನ ಸ್ವಾಧೀನ ಹೊಂದಿರುವ ಬಗ್ಗೆ ಕಂಡುಬರುತ್ತದೆ. ಅದೇ ರೀತಿ ನಿಪಿ-5 ರ ಪ್ರಕಾರ ವಾದಿಯ ಗಂಡ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದ ಪತ್ರದಲ್ಲಿ ತಿಳಿಸಿದಂತೆ ಪೊಲೀಸ್ ಠಾಣೆಗೆ ದೂರು ನೀಡಿರುವುದು ಕಂಡು ಬಂದಿದ್ದು, ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಹಾಗೂ ತಮ್ಮ ಪರವಾಗಿ ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸದೇ ಇರುವುದರಿಂದ ವಾದಿಯ ಸಾಕ್ಷ್ಯದಲ್ಲಿನ ಅಂಶಗಳು ನಿರಾಕರಣೆಯಾಗದೇ ಉಳಿದಿದ್ದು ಹಾಗೂ ವಾದಿಯ ಸಾಕ್ಷ್ಯಕ್ಕೆ ವಿರೋಧಾಭಾಸ ತೋರುವ ಯಾವುದೇ ಸಾಕ್ಷ್ಯಗಳು ಕಂಡುಬಂದಿರುವುದಿಲ್ಲ. ಆದ್ದರಿಂದ ವಾದಿಯು

ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ವಾದಿಯು ದಾವಾ ಸ್ವತ್ತಿನ ಸ್ವಾಧೀನ ಹೊಂದಿರುತ್ತಾರೆಂದು ಹಾಗೂ ಪ್ರತಿವಾದಿಯರು ಅದಕ್ಕೆ ತಂಟೆ ತಕರಾರು ಮಾಡಿರುವ ಬಗ್ಗೆ ರುಜುವಾತುಪಡಿಸಿರುತ್ತಾರೆಂದು ಈ ನ್ಯಾಯಾಲಯ ಅಭಿಪ್ರಾಯ ಪಡುತ್ತದೆ. ಆದ್ದರಿಂದ ವಾದಿಯು ದಾವೆಯಲ್ಲಿ ಕೇಳಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತಾ, ಅಂಶ-1 ರಿಂದ 3 ನ್ನು ಸಕಾರಾತ್ಮಕ ಎಂದು ಉತ್ತರಿಸಲಾಗಿದೆ.

14. **ಅಂಶ - 4** ಃ ಈ ಮೇಲ್ಕಂಡ ಅಂಶ-1 ರಿಂದ 3 ನ್ನು ನಿರ್ಣಯಿಸಲಾಗಿ ಮತ್ತು ಅವುಗಳಿಗೆ ನೀಡಿದ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ ಃ

## ಆದೇಶ

ವಾದಿಯು ಸಲ್ಲಿಸಿದ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ.

ವಾದಿಯ ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು, ಅವರ ಮನೆಯವರು ಮತ್ತು ಅವರಿಂದ ನೇಮಕಗೊಂಡ ಯಾವುದೇ ಕೆಲಸಗಾರರು ಹಾಗೂ ಪ್ರತಿನಿಧಿಗಳು, ಬೆಂಬಲಿಗರು ಮತ್ತು ಯಾವುದೇ ವ್ಯಕ್ತಿಗಳು ಅತಿಕ್ರಮ ಪ್ರವೇಶವನ್ನುಂಟು ಮಾಡಿ ದಾವಾ ಶೆಡ್ಯೂಲ್ ಸ್ವತ್ತಿನ ಕಲ್ಲುಕಂಬ ಮತ್ತು ತಂತಿಯನ್ನು ಕಿತ್ತುಹಾಕದಂತೆ ಮತ್ತು ವಾದಿಯು ಹಾಕಿರುವ ಕಲ್ಲುಕಂಬಗಳಿಗೆ ತಂತಿಯನ್ನು ಹಾಕುವಾಗ ಅಡ್ಡಿಪಡಿಸದಂತೆ, ಯಾವುದೇ ರೀತಿಯ ಕ್ಷತಿಗಳನ್ನು ದಾವಾ ಸ್ವತ್ತಿಗೆ ಮಾಡದಂತೆ ಈ ಮೂಲಕ ಅವರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ನೀಡಲಾಗಿದೆ.

ಈ ಪ್ರಕಾರ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ *23* ನೇ ಏಪ್ರಿಲ್ *2021* ರಂದು ನಾನು ಉದ್ಘೋಷಿಸಿದ್ದೇನೆ.)

ಸಹಿ
(ರಾಮಮೂರ್ತಿ.ಎನ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

## ಅನುಬಂಧ

**ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

ವಾಸಾ-1 : ಹೆಚ್.ಆರ್.ಚಂದ್ರಮ್ಮ

**ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

ನಿಪಿ-1 : ಕ್ರಯ ಪತ್ರದ ದೃಢೀಕೃತ ನಕಲು
ನಿಪಿ-2 : ಪಹಣಿ ಪತ್ರಿಕೆ
ನಿಪಿ-3 : ಮ್ಯುಟೇಷನ್ ರಿಜಿಸ್ಟರ್ ಪ್ರತಿ
ನಿಪಿ-4 : ಕಂದಾಯ ರಶೀದಿ
ನಿಪಿ-5 : ಪೊಲೀಸರು ನೀಡಿದ ಹಿಂಬರಹ

**ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

- ಇಲ್ಲ -

**ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

- ಇಲ್ಲ -

ಸಹಿ
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.